ಸಹಕಾರ ಸಂಘಗಳ ನಿಬಂಧಕರ ಕಛೇರಿ
ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು –52**

**ಸಂ:ಆರ್‌ಸಿಎಸ್/ಎಡಿಎಂ/03/ಸುತ್ತೋಲೆ–ಆಜತ/2021–22,** **ದಿ: ~~3.06~~.2021** 07

## ಸುತ್ತೋಲೆ.

**ವಿಷಯ:–** ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಗಳು–2021 ರನ್ವಯ, ಸಾಲು 2020–21ರ ಆಸ್ತಿ–ಹೊಣೆಗಾರಿಕೆ ವಿವರಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:–** (1) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/12/ಸೇನಿಸಿ/2019 ದಿನಾಂಕ:07.01.2021.
(2) ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/05/ಪಿಎಂಎಸ್/2019 ದಿನಾಂಕ:21.01.2021.

***

**ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಗಳು–2021ನ್ನು** ಪರಿಷ್ಕರಿಸಿ ಜಾರಿಗೆ ತಂದಿದ್ದು, ಈ ನಿಯಮಗಳು / ಆದೇಶಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು / ಅನ್ವಯವಾಗತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. ಅದರಂತೆ ಅಧಿಸೂಚನೆ ಸಂಖ್ಯೆ:ಸಿಆಸುಇ/12/ಸೇನಿಸಿ/2019 ದಿನಾಂಕ:07.01.2021 ರಂದು ಅಧಿಕೃತವಾಗಿ ಪ್ರಕಟಗೊಂಡಿರುತ್ತದೆ.

**ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಗಳು–2021ರ ನಿಯಮ–24(1) ಮತ್ತು ನಿಯಮ–24(2) ರನ್ವಯ** "ಪ್ರತಿಯೊಬ್ಬ ರಾಜ್ಯ ಸರ್ಕಾರಿ ನೌಕರರು ಯಾವುದೇ ಸೇವೆಗೆ ಅಥವಾ ಹುದ್ದೆಗೆ ಪ್ರಥಮವಾಗಿ ನೇಮಕಗೊಂಡಾಗ ತನ್ನ ಸ್ವಂತ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಅಥವಾ ಇತರೆ ವ್ಯಕ್ತಿಯ ಹೆಸರಿನಲ್ಲಿ ಪಿತ್ರಾರ್ಜಿತವಾಗಿ ಬಂದ ಸ್ವಯಂ ಅರ್ಜಿಸಿದ ಅಥವಾ ಗುತ್ತಿಗೆ ಅಥವಾ ಅಡಮಾನದ ಮೇಲೆ ತಾನು ಹೊಂದಿರುವ ಸ್ಥಿರಾಸ್ತಿಯ ಸಂಪೂರ್ಣ ವಿವರಗಳನ್ನು ನೀಡಿ ನಿಗದಿತ ನಮೂನೆಯಲ್ಲಿ ತನ್ನ ಚರ ಮತ್ತು ಸ್ಥಿರಾಸ್ತಿಗಳ ವಿವರಗಳ ಪಟ್ಟಿಯನ್ನು ಪೂರಕ ದಾಖಲೆಗಳೊಂದಿಗೆ ಮೂರು ತಿಂಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ತರುವಾಯ ಡಿಸೆಂಬರ್ 31ಕ್ಕೆ ಅಂತ್ಯಗೊಳ್ಳುವ ಪ್ರತಿ 12 ತಿಂಗಳಿಗೊಮ್ಮೆ ತನ್ನ ಹಾಗೂ ತನ್ನ ಕುಟುಂಬದ ಎಲ್ಲಾ ಸದಸ್ಯರು ಆಸ್ತಿಗಳ ಮತ್ತು ಹೊಣೆಗಾರಿಕೆಗಳು ವಾರ್ಷಿಕ ವಿವರ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಸಂಪೂರ್ಣ ವಿವರಗಳೊಂದಿಗೆ ಸಲ್ಲಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ."

ಈ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯ / ಸಹಕಾರ ಸಂಘಗಳ ನಿಬಂಧಕರ ವ್ಯಾಪ್ತಿಯ ಗ್ರೂಪ್–ಎ/ಬಿ/ಸಿ/ಡಿ ವೃಂದದ ಎಲ್ಲಾ ಅಧಿಕಾರಿ ನೌಕರರು ತಮ್ಮ ಚರ–ಸ್ಥಿರ ಆಸ್ತಿಗಳ ವಿವರಗಳನ್ನು ಇದುವರೆವಿಗೂ ಸಲ್ಲಿಸುತ್ತಿದ್ದ **ಮಾರ್ಚ್–31ಕ್ಕೆ** ಅಂತ್ಯಗೊಳ್ಳುವ, ಪ್ರತಿ 12 ತಿಂಗಳಿಗೊಮ್ಮೆ ಅನ್ನೋದಕ್ಕೆ ಬದಲಾಗಿ, ಇನ್ನು ಮುಂದೆ **ಡಿಸೆಂಬರ್–31ಕ್ಕೆ** ಅಂತ್ಯಗೊಳ್ಳುವ ಪ್ರತಿ 12 ತಿಂಗಳಿಗೊಮ್ಮೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಮೇಲಾಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು ಎಂದು ಈ ಮೂಲಕ ಸೂಚಿಸಿದೆ.

*–ಪುತಿನೋ–*

ಪರಿಶೋಧನಾ ಪ್ರಾಧಿಕಾರಗಳು ಪರಿಶೀಲಿಸಿ, ಉತ್ತರ ಅಸಮರ್ಪಕವಾಗಿದ್ದಲ್ಲಿ, ವಿವರಣೆ ಕೋರಿ, ಕ್ರಮವಹಿಸಿ, ಮುಂದಿನ ಕ್ರಮಕ್ಕಾಗಿ ಸಕ್ಷಮ ಪ್ರಾಧಿಕಾರಗಳಿಗೆ ತಪಾಸಣೆಗೆ ಹಾಗೂ ಕ್ರಮಕ್ಕೆ ಸೂಚಿಸಬಹುದಾಗಿದೆ. ಕೊರೊನಾ ಸಾಂಕ್ರಾಮಿಕ ರೋಗದ ಕಾರಣದಿಂದ ಸರ್ಕಾರವು ದಿ:26.04.2021 ರಿಂದ ದಿ:13.06.2021 ರವರೆಗೆ ಲಾಕ್‌ಡೌನ್ ಜಾರಿ ಮಾಡಿದ್ದರಿಂದ ವಿಳಂಭವಾಗಿದ್ದು, ಎಲ್ಲಾ ನೌಕರರುಗಳು ತುರ್ತಾಗಿ ಅನುಪಾಲನಾ ಕ್ರಮವಹಿಸಲು ತಿಳಿಸಿದೆ.

ಸರ್ಕಾರದ ನಿರ್ದೇಶನಗಳ ಪಾಲನೆ ಎಲ್ಲಾ ನೌಕರರ ಆದ್ಯ ಕರ್ತವ್ಯ ವಾಗಿರುತ್ತದೆ. ಆದ್ದರಿಂದ ಎಲ್ಲಾ ಸರ್ಕಾರಿ ನೌಕರರು ಪ್ರತಿ ವರ್ಷವೂ **ವಾರ್ಷಿಕ ಆಸ್ತಿ ಹೊಣೆಗಾರಿಕೆ ತಖ್ತೆಗಳನ್ನು** ನಿಗದಿತ ಸಮಯದೊಳಗೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ನಿಯಂತ್ರಣಾಧಿಕಾರಿಗಳು ಕಾಲಮಿತಿಯೊಳಗೆ ನೌಕರರುಗಳು ಸಲ್ಲಿಸಲು ಅವಶ್ಯಕ ಕ್ರಮವಹಿಸಲು ಸೂಚಿಸಿದೆ.

(ಎಸ್.ಜಿಯಾಉಲ್ಲಾ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕರಾಜ್ಯ, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಅಗತ್ಯ ತುರ್ತು ಕ್ರಮಕ್ಕಾಗಿ ಕಳುಹಿಸಿದೆ:**

(1) ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ.
(2) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
(3) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,
(4) ಎಲ್ಲಾ ಉಪ ವಿಭಾಗೀಯ ಸ.ಸಂ. ಸಹಾಯಕ ನಿಬಂಧಕರು,
(5) ಇಲಾಖೆಯ ಜಾಲತಾಣಕ್ಕೆ.